ಮಾಡುವ ಅಧಿಕಾರ ತಹಶೀಲ್ದಾರ್‌ರಿಗೆ ಇದೆ. ನಾಳೆ ತಹಶೀಲ್ದಾರ್ ಏನಾದರೂ ತಪ್ಪು ಮಾಡಿದರೆ Assistant Commissioner ಕಡೆಗೆ ಅದನ್ನು appeal ಮಾಡಬೇಕಾಗುತ್ತದೆ. ಅದರ ಮೇಲೆ review D.C. ಮಾಡಬೇಕಾಗುತ್ತದೆ. ಇದನ್ನು ತಹಶೀಲ್ದಾರ್ ಮಟ್ಟದಲ್ಲಿ ನಾವು ಯಾವಾಗಲೂ correction ಮಾಡಲಿಕ್ಕೆ ಸಾಧ್ಯವಿದೆ. ಹೀಗಾಗಿ ಇದರಲ್ಲಿ ಯಾವುದೇ ತೊಂದರೆಯಾಗಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಈ ಭೂಮಿ ಯೋಜನೆ ಬಹಳ ಯಶಸ್ವಿಯಾಗಿ ನಡೆಯುತ್ತಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ವಿಷಯ : ಮೌಲ್ಯವರ್ಧಿತ ತೆರಿಗೆಯಿಂದಾದ ನಷ್ಟವನ್ನು ತುಂಬಿಕೊಡುವ ಬಗ್ಗೆ.

208 (1278) ಶ್ರೀ ಎಂ. ಮಹದೇವಪ್ಪ (ಕೃಷ್ಣರಾಜನಗರ): ಮಾನ್ಯ ಉಪ ಮುಖ್ಯಮಂತ್ರಿಗಳು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೌಲ್ಯವರ್ಧಿತ ತೆರಿಗೆ (ವ್ಯಾಟ್)ಯನ್ನು ರಾಜ್ಯದಲ್ಲಿ ಜಾರಿಗೆ ತಂದ ನಂತರ ಕೇಂದ್ರ ಸರ್ಕಾರದಿಂದ ಪಡೆದಿರುವ ಆರ್ಥಿಕ ಪ್ರಯೋಜನಗಳು ಯಾವುವು;

ಆ) ವ್ಯಾಟ್‌ನಿಂದಾದ ನಷ್ಟ ತುಂಬಿಕೊಳ್ಳಲು ರಾಜ್ಯ ಸರ್ಕಾರವು ವ್ಯಾಟ್ ವಿಸ್ತರಣೆಗೆ ಕೈಗೊಂಡ ಕ್ರಮಗಳು ಏನು; ಮಾಹಿತಿ ಒದಗಿಸುವುದು?

ಶ್ರೀ ಬಿ. ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) :

ಅ) ಮೌಲ್ಯವರ್ಧಿತ ತೆರಿಗೆ (ವ್ಯಾಟ್)ಯನ್ನು ರಾಜ್ಯದಲ್ಲಿ ದಿನಾಂಕ: 01.04.2005 ರಿಂದ ಜಾರಿಗೆ ತರಲಾಗಿದೆ. ವ್ಯಾಟ್ ಜಾರಿಯಿಂದಾಗಿ ರಾಜ್ಯ ಸರ್ಕಾರಕ್ಕೆ ಆದ ನಷ್ಟವನ್ನು ಕೇಂದ್ರ ಸರ್ಕಾರವು 1272.20 ಕೋಟಿ ರೂ.ಗಳನ್ನು ನಷ್ಟ ಪರಿಹಾರವಾಗಿ ಪಾವತಿಸುವುದರ ಮೂಲಕ ಆರ್ಥಿಕ ಪ್ರಯೋಜನ ಒದಗಿಸಿದೆ.

ಆ) ವ್ಯಾಟ್ ಕಾಯ್ದೆಯಡಿಯಲ್ಲಿ ತೆರಿಗೆ ಪಾವತಿ ಮಾಡುವವರ ಸಂಖ್ಯೆ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ. ಈ ಯೋಜನೆಯ ಅಂಗವಾಗಿ ವ್ಯಾಟ್ ವಿಸ್ತರಣೆಗಾಗಿ ಸಮೀಕ್ಷೆ ಕೈಗೊಂಡು ವ್ಯಾಟ್ ಕಾಯ್ದೆಯಡಿ 1,65,679 ವ್ಯಾಪಾರ ಮಳಿಗೆಗಳಿಗೆ ಭೇಟಿ ನೀಡಲಾಗಿದೆ, ಮತ್ತು 58,202 ನೋಂದಣಿ ಮಾಡದಿರುವ ವರ್ತಕರುಗಳನ್ನು ಗುರುತಿಸಿ ಅವುಗಳನ್ನು ನೋಂದಣಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇದಲ್ಲದೆ, ತೆರಿಗೆ ಪರಿಪಾಲನೆಯನ್ನು ಹೆಚ್ಚಿಸುವ ಉದ್ದೇಶದಿಂದ ಪರೀಕ್ಷಾರ್ಥ ಖರೀದಿ ಮತ್ತು ವ್ಯಾಪಾರಸ್ಥರ ಸ್ಥಳ ತಪಾಸಣೆ ಕೂಡ ಹೆಚ್ಚಿಸಲಾಗಿದೆ. 2006–07ನೇ ಸಾಲಿನಲ್ಲಿ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಒಟ್ಟು ಸುಮಾರು 503 ಪರೀಕ್ಷಾರ್ಥ ಖರೀದಿಗಳನ್ನು ಮತ್ತು ಸುಮಾರು 325 ವ್ಯಾಪಾರಸ್ಥರ ಸ್ಥಳಗಳನ್ನು ತನಿಖೆಗೊಳಪಡಿಸಲಾಗಿದೆ.

ರಾಜ್ಯ ಮಟ್ಟದಲ್ಲಿ ಬೆಂಗಳೂರಿನಲ್ಲಿ ಅಲ್ಲದೇ ರಾಜ್ಯ ಇತರ ಎಲ್ಲಾ ಜಿಲ್ಲೆಗಳ ಕೇಂದ್ರ ಸ್ಥಾನಗಳಲ್ಲಿ ಮತ್ತು ಪ್ರಮುಖ ತಾಲ್ಲೂಕುಗಳ ಕೇಂದ್ರ ಸ್ಥಳಗಳಲ್ಲಿ ಹೊಸ ತೆರಿಗೆ ವ್ಯವಸ್ಥೆಯ ವಿವರಗಳನ್ನು ಸಂಬಂಧಪಟ್ಟ ಎಲ್ಲಾ ವ್ಯಾಪಾರಿಗಳಿಗೆ ನೀಡಲು ವಿಚಾರ ಸಂಕೀರ್ಣಗಳನ್ನು ಮತ್ತು ಚರ್ಚಾಕೂಟಗಳನ್ನು ನಡೆಸಲಾಗಿದೆ. ಇಂತಹ ಸಭೆಗಳಲ್ಲದೇ, ಪ್ರತಿ ವ್ಯಾಪಾರಿಗಳಿಗೂ ವ್ಯಾಟ್ ಸಂಬಂಧಿತ ಮಾಹಿತಿಯನ್ನೊಳಗೊಂಡ ಕೈಪಿಡಿ ಹಂಚುವ ವ್ಯವಸ್ಥೆಗಳನ್ನು ಮಾಡಲಾಗಿದೆ. ದೂರದರ್ಶನ,

ರೇಡಿಯೋ ಹಾಗೂ ಪತ್ರಿಕಾ ಮಾಧ್ಯಮಗಳ ಮೂಲಕ ವ್ಯಾಟ್ ಬಗ್ಗೆ ಮಾಹಿತಿ, ಮತ್ತು ಪ್ರಶ್ನೋತ್ತರಗಳ ಮೂಲಕ ವ್ಯಾಪಾರಿಗಳ ಶಂಕೆಗಳನ್ನು ನಿವಾರಿಸಲು ಕ್ರಮ ಕೈಗೊಳ್ಳಲಾಗಿದೆ. ವ್ಯಾಟ್ ಕಾಯ್ದೆ ಜಾರಿಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಮಾಡಲು ರಾಜ್ಯ ಮಟ್ಟದಲ್ಲಿ ಹಣಕಾಸು ಸಚಿವರ ಅಧ್ಯಕ್ಷತೆಯಲ್ಲಿ ಒಂದು ಸಲಹಾ ಸಮಿತಿಯನ್ನು ರಚಿಸಲಾಗಿದೆ. ಇದಲ್ಲದೆ, ಜಿಲ್ಲಾ ಮಟ್ಟದಲ್ಲಿ ಕೂಡ ಸಲಹಾ ಸಮಿತಿಗಳನ್ನು ರಚಿಸಲಾಗಿದ್ದು, ಇವುಗಳಲ್ಲಿ ಪ್ರಮುಖ ವಾಣಿಜ್ಯ ಮತ್ತು ಕೈಗಾರಿಕಾ ಸಂಘ ಸಂಸ್ಥೆಗಳ ಪ್ರತಿನಿಧಿಗಳನ್ನು ಮತ್ತು ಕರ ಮತ್ತು ಕಾನೂನು ಸಲಹೆಗಾರರೂ ಸಹ ಸದಸ್ಯರಾಗಿರುತ್ತಾರೆ.

ಶ್ರೀ ಎಂ. ಮಹದೇವ : ಮಾನ್ಯ ಅಧ್ಯಕ್ಷರೆ, ಸರ್ಕಾರ ಒದಗಿಸಿರುವ ಉತ್ತರ ಪರಿಪೂರ್ಣವಾದ ಉತ್ತರವಲ್ಲವೆಂದು ನನಗನ್ನಿಸುತ್ತದೆ. ವ್ಯಾಟ್‌ನಿಂದ ಆಗಿರುವ ನಷ್ಟವನ್ನು ಕೇಂದ್ರ ಸರ್ಕಾರ ತುಂಬಿಕೊಡುತ್ತಿದೆ. ಕಳೆದ ವರ್ಷ 100% ಕೊಟ್ಟಿದ್ದಾರೆ. 1,272 ಕೋಟಿ ರೂಪಾಯಿಗಳಿಗೆ ಸಂಪೂರ್ಣವಾಗಿ ಕೇಂದ್ರ ಸರ್ಕಾರ ತುಂಬಿಕೊಟ್ಟಿದೆ. 2006–07ಕ್ಕೆ 75 ಪರ್ಸೆಂಟ್ ತುಂಬಿಕೊಡುತ್ತಾರೆಂದರೆ ಸುಮಾರು 900 ಕೋಟಿ ರೂಪಾಯಿಗಳು ಕೇಂದ್ರ ಸರ್ಕಾರದಿಂದ ಬರುತ್ತದೆ. ಈ 300 ಕೋಟಿ ರೂಪಾಯಿಗಳಷ್ಟು ಕೊರತೆಯನ್ನು ಈ VAT base ಅನ್ನು expand ಮಾಡಿ ತಾವು ಅದನ್ನು ಹೇಗೆ mop up ಮಾಡುತ್ತೀರೆಂದು ನಾನು ಕೇಳಿದ್ದೆ. ಇದರಲ್ಲಿ ಎಷ್ಟು ಅಂಗಡಿಗಳಿಗೆ ಭೇಟಿ ಮಾಡಿದ್ದೇವೆಂದು ಮಾತ್ರ ಮಾಹಿತಿ ಇದೆ. ಆದರೆ ಎಲ್ಲಿ project ಎಷ್ಟೆಷ್ಟು ಹಣ ಬರಬೇಕು, ನಿರೀಕ್ಷಿಸಿದ ಹಣ ಎಲ್ಲೆಲ್ಲಿಂದ ಬರುತ್ತದೆ ಎಂದು ತಾವು ತಿಳಿಸಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೆ, ಕಳೆದ 2005ನೇ ಸಾಲಿನಲ್ಲಿ 2050 ಕೋಟಿ ರೂಪಾಯಿಗಳಷ್ಟು ನಮಗೆ ಅಂದಾಜು ನಷ್ಟವಾಗಬಹುದೆಂದು ನಿರೀಕ್ಷೆ ಮಾಡಿದ್ದೆವು. ನಮ್ಮ ಅಧಿಕಾರಿಗಳ ವಿಶೇಷ ಪರಿಶ್ರಮ ಮತ್ತು ಕಟ್ಟುನಿಟ್ಟಾಗಿ ಜಾರಿಗೆ ತಂದ ಪರಿಣಾಮ ಈ VAT ಜಾರಿಯಿಂದ 1272 ಕೋಟಿ 20 ಲಕ್ಷ ರೂಪಾಯಿಗಳು ಮಾತ್ರ ನಷ್ಟವಾಗಿದ್ದು ಅದನ್ನು ಕೇಂದ್ರ ಸರ್ಕಾರ ಸಂಪೂರ್ಣವಾಗಿ ತುಂಬಿಕೊಟ್ಟಿದೆ. ಈಗಾಗಲೇ ನಿಮಗೆಲ್ಲಾ ಗೊತ್ತಿರುವ ಹಾಗೆ 2005–06ನೇ ಸಾಲಿನ ಅಂದರೆ ಕಳೆದ ಸಾಲಿನಲ್ಲಿ ಇದರ loss ಅನ್ನು 100% ಕೇಂದ್ರ ಸರ್ಕಾರ ತುಂಬಿಕೊಡುತ್ತದೆ. 2006–07ನೇ ಸಾಲಿಗೆ 75% ತುಂಬಿಸಿಕೊಡುತ್ತದೆ. 2007–08ರ ಸಾಲಿಗೆ 50% ತುಂಬಿಕೊಂಡುತ್ತದೆ. ಈ ರೀತಿ ನಿಯಮ ಇರುವಂಥದ್ದು. ಈ ವರ್ಷ ಸಹ ನಮ್ಮ ಅಂದಾಜು ನಷ್ಟ 2050 ಕೋಟಿ ರೂಪಾಯಿಗಳು ಎಂದು ಹೇಳಿದ್ದೆವು. ಆದರೆ ಒಂದು ಸಂತೋಷದ ಸಂಗತಿಯನ್ನು ನಿಮಗೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಕಳೆದ ಮೂರು ತಿಂಗಳಲ್ಲಿ ನಾವೇನು ತೆರಿಗೆ ಸಂಗ್ರಹ ಮಾಡಬೇಕಾಗಿತ್ತೋ ಸಂಗ್ರಹ ಮಾಡಿದ್ದೇವೆ. ಯಾವುದೇ loss ಆಗಿಲ್ಲ. ಅಂದರೆ ಈ ಮೂರು ತಿಂಗಳ ಪ್ರಗತಿ ಆಶಾದಾಯಕವಾಗಿದೆ. ನಮ್ಮ ಅಧಿಕಾರಿಗಳು ವಿಶೇಷ ಪರಿಶ್ರಮ ಹಾಕಿ ಯಾವುದೇ loss ಆಗದ ರೀತಿ ಸಂಗ್ರಹ ಮಾಡಿದ್ದಾರೆ. ಮುಂದೇನಾಗುತ್ತದೋ ಕಾದು ನೋಡೋಣ. ನಾವು ಈಗಾಗಲೇ ನಷ್ಟವಾಗಿರುವುದನ್ನು ತುಂಬಿಕೊಡುವುದಕ್ಕೋಸ್ಕರ ಸುಮಾರು 1 ಲಕ್ಷದ 65 ಸಾವಿರ ಮಳಿಗೆಗಳಿಗೆ ಭೇಟಿ ನೀಡಿ 58,202 ವ್ಯಾಪಾರಸ್ಥರು VAT register ಮಾಡಿಸಿರಲಿಲ್ಲ. ಒಂದು ರೀತಿ ಅವರನ್ನು ಕಂಡುಹಿಡಿದು VAT base ಅನ್ನು ವಿಸ್ತರಣೆ ಮಾಡುವಂಥ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ. ಇದಲ್ಲದೆ ಸುಮಾರು 503 ಅಂಗಡಿಗಳಲ್ಲಿ test ಖರೀದಿ ಎಂದು ಹೋಗಿ ಅವರು ಏನು ಮಾರುತ್ತಾರೆ,

ಏನು ಮಾರುತ್ತಿಲ್ಲವೆನ್ನುವ ಪರೀಕ್ಷೆ ಮಾಡುವ ಪ್ರಯತ್ನ ಮಾಡಿದ್ದೇವೆ. ಈ ರೀತಿ ಖರೀದಿ ಮಾಡಿದ 503 test ಖರೀದಿಗಳಲ್ಲಿ ಕಳೆದ ಎರಡು ತಿಂಗಳುಗಳಲ್ಲಿ ಸುಮಾರು 325 ಜನ ಈ ರೀತಿಯ ವ್ಯವಹಾರ ಮಾಡತಕ್ಕಂಥವರು ನಮಗೆ ಸಿಕ್ಕಿದ್ದಾರೆ. ಅಂದರೆ 503 test ಖರೀದಿ ಮಾಡಿದರೆ 325 ಜನ ಸಿಕ್ಕಿಹಾಕಿಕೊಂಡಿದ್ದಾರೆ. ವಂಚನೆ ಪ್ರಕರಣದಲ್ಲಿ ಸುಮಾರು 5 ಕೋಟಿ 47 ಲಕ್ಷ ರೂಪಾಯಿಗಳ ತೆರಿಗೆ ವಂಚನೆಯನ್ನು ನಾವು ಪತ್ತೆ ಮಾಡಿದ್ದೇವೆ. ನಂತರ VAT ಸಲಹಾ ಸಮಿತಿ ಮಾಡಿ, ಅದರಿಂದ ವ್ಯಾಪಾರಿಗಳ ಜೊತೆ ಚರ್ಚೆ ಮಾಡಿ ಅವರು ಇದರಲ್ಲಿ ಭಾಗವಹಿಸುವಂತೆ ನೋಡಿಕೊಳ್ಳುವ ಪ್ರಯತ್ನ ಮಾಡುತ್ತಿದ್ದೇವೆ. Trade meetings ಅನ್ನು ಮಾಡುತ್ತಿದ್ದೇವೆ. ಸುಧಾರಣಾ ಕ್ರಮ ಕೈಗೊಳ್ಳುತ್ತಿದ್ದೇವೆ. ನಾನು ಹೇಳುವುದಿಷ್ಟೆ. ಮೂರು ತಿಂಗಳಲ್ಲಿ ಪ್ರಗತಿಯಾಗಿದೆ. ಯಾರು ತೆರಿಗೆ ಕೊಡದೆ ವಂಚಿಸುತ್ತಿದ್ದರೋ ಅವರನ್ನು book ಮಾಡಿ ಅವರನ್ನು ಈ ಒಂದು ತೆರಿಗೆ ವ್ಯಾಪ್ತಿಯಲ್ಲಿ ತರುವಂಥ ಪ್ರಯತ್ನವನ್ನು ಮಾಡುತ್ತಿದ್ದೇವೆ. ನಾವು ನಮ್ಮ ಶಕ್ತಿಮೀರಿ ಈ 2 ಲಕ್ಷದ ಒಳಗಡೆ ಇರುವ ಎಲ್ಲಾ ವ್ಯವಹಾರಸ್ಥರನ್ನು ಈ VAT ನ ಅಡಿಯಲ್ಲಿ ತರುವಂಥ ಪ್ರಯತ್ನ ನಡೆಸಿದ್ದೇವೆ. ಸಾಕಷ್ಟು ಪ್ರಗತಿಯಾಗುತ್ತದೆನ್ನುವ ವಿಶ್ವಾಸ ನಮಗಿದೆ.

ಶ್ರೀ ಎಂ. ಮಹದೇವ : ಕೆಲವು sectors ಅನ್ನು ತಾವು ಹೇಳಿದಿರಿ, 1,65,679 ವ್ಯಾಪಾರಿ ಮಳಿಗೆಗಳಿಗೆ ಭೇಟಿ ಮಾಡಿದ್ದೇವೆಂದು. ಈಗ ವ್ಯಾಪಾರಿ ಮಳಿಗೆಗಳೆಂದು ಹೆಸರಿಗೆ ಕಾಣತಕ್ಕಂಥ services ಇವೆಲ್ಲಾ. ಆದರೆ, ಬೆಂಗಳೂರಿನಲ್ಲಿ I.T. ಗೆ ಸಂಬಂಧಪಟ್ಟ ಹಾಗೆ I.T. Industries ಬೆಳೆದ ಮೇಲೆ ಕೆಲವು ವ್ಯಾಪಾರದ ಮಳಿಗೆಗಳ ಹಾಗೆ ಕಾಣುವುದಿಲ್ಲ. ಆದರೂ ಕೂಡ they are generating a lot of income. ಅಂಥವನ್ನು ಇವತ್ತಿನವರೆಗೂ ಕೂಡ tax net ಗೆ ತರುವುದಕ್ಕೆ ತಾವು ಪ್ರಯತ್ನ ಮಾಡಿಲ್ಲ. For example, ತಮಗೆ ಹೇಳುವುದಾದರೆ Hotel ಎಂದು ಹೆಸರಿಲ್ಲ. ಆದರೂ ಕೂಡ service apartments ಎಂದು three star hotel ರವರಿಗಿಂತ ಹೆಚ್ಚು ಹಣ ಪಡೆದುಕೊಳ್ಳುತ್ತಿದ್ದಾರೆ. They are only paying luxury tax, if I am correct, KST ಇಲ್ಲ ಅವರಿಗೆ. ಎರಡನೆಯದು, ಈ catering services; Hotel ಎಂದು ಹೆಸರು ಹಾಕಿಕೊಂಡಿಲ್ಲ. ಆದರೂ ಕೂಡ ಇವತ್ತು I.T. Factory ಯವರಿಗೆ ದೊಡ್ಡ ದೊಡ್ಡ factory ಗಳಿಗಿಂತ ಹೆಚ್ಚಾಗಿ Hotels ನವರು ನಡೆಸುವ ವಹಿವಾಟಿಗಿಂತ ಹತ್ತು ಪರ್ಸೆಂಟ್ ಹೆಚ್ಚು ನೂರು ಪರ್ಸೆಂಟ್ ಹೆಚ್ಚು ವಹಿವಾಟನ್ನು ನಡೆಸುವ catering services ಇದೆ. ಅದನ್ನೂ ಕೂಡ ನೀವು VAT bose ಗೆ ತರುವುದಕ್ಕೆ, include ಮಾಡಲಿಕ್ಕೆ ಇವತ್ತಿನವರೆಗೂ ಆಗಲಿಲ್ಲ. ಈಗ service apartments, around 20 thousands rooms ಇವೆ. ಕೋರಮಂಗಲ, ಇಂದಿರಾನಗರ ಜಯನಗರ side ನಲ್ಲಿ ಅದೂ ಕೂಡ ದೊಡ್ಡ luxurious business ಆಗಿಬಿಟ್ಟಿದೆ. ದೊಡ್ಡ ದೊಡ್ಡ ಮನೆಗಳನ್ನು ತೆಗೆದುಕೊಳ್ಳುತ್ತಾರೆ, hospitals ಅನ್ನು ತೆಗೆದುಕೊಳ್ಳುತ್ತಾರೆ, Choultry ಗಳನ್ನು ತೆಗೆದುಕೊಳ್ಳುತ್ತಾರೆ. ಅದನ್ನು service apartment ಗಳಾಗಿ convert ಮಾಡುತ್ತಿದ್ದಾರೆ. ಜೊತೆಗೆ they charge more than three star Hotels. ಇದರ ಜೊತೆಗೆ paying guests ಎನ್ನುವ ಹೊಸ

concept. Again ಇವೆಲ್ಲಾ I.T. ಗೆ ಸಂಬಂಧಪಟ್ಟ ಹಾಗೆ ಇವೆಲ್ಲಾ follow up ಗಳು. ಇವೆಲ್ಲಾ spin off ಸಿಗುತ್ತಿರುವುದು. ಬೆಂಗಳೂರಿನಲ್ಲಿ ಇಲ್ಲವೆಂದರೂ ಕೂಡ ಸುಮಾರು ಎರಡೂವರೆ, ಮೂರು ಲಕ್ಷ ಜನಕ್ಕಿಂತ ಹೆಚ್ಚು paying guests ಇದ್ದಾರೆ. ಆ paying guests ಮನೆ ತೆಗೆದುಕೊಳ್ಳುವುದು, 40–50–60 ಸಾವಿರ advance ತೆಗೆದುಕೊಂಡು 20–30 ಜನಗಳಿಗೆ paying guest ಆಗಿ ಲಕ್ಷಾಂತರ ರೂಪಾಯಿಗಳನ್ನು ದುಡಿಯುತ್ತಾರೆ. ಏಕೆಂದರೆ, ನೀವು ಹಳ್ಳಿಗಳಿಗೆ ಹೋಗಿ VAT expand ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಸಂತೋಷ. ಆದರೆ ಇದು ಪ್ರಾರಂಭವಾಗಬೇಕಾಗಿರುವುದು ಬೆಂಗಳೂರಿನಲ್ಲಿಯೇ. Especially ನಾನು ಹೇಳುವುದು ಈ catering services and services apartments, last time ಕೂಡ ನಾವು ಅದನ್ನು ಆರ್ಥಿಕ ಇಲಾಖೆಯವರ ಗಮನಕ್ಕೆ ತಂದಿದ್ದೆವು. I don't know, some how, they reluctant to act on that. ದಯವಿಟ್ಟು ಇದನ್ನು ತಾವು ತಂದರೆ, ತಮಗೆ resources mop up ಮಾಡುವುದಕ್ಕೆ it will be really helpful. ಇಷ್ಟನ್ನು ಮಾನ್ಯ ಉಪ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಹಳ್ಳಿಗಳಲ್ಲಿ, taluk levels ನಲ್ಲಿ ಇವತ್ತು ಕೂಡ, I can tell you, ನಿಮ್ಮ ಇಲಾಖೆಯಲ್ಲಿ lethargy ಇದೆ. ತಾಲ್ಲೂಕು ಮಟ್ಟದಲ್ಲಿ ಇವತ್ತು ಕೂಡ VAT has not been completely introduced. At least, ಆ implementation ಮಾಡಿಸುವುದು complete ಆಗದಿದ್ದರೂ ಆ implementation ಮಾಡುವಷ್ಟು enthusiasm ನಿಮ್ಮ ಇಲಾಖೆಗಳಲ್ಲಿ ಇದ್ದ ಹಾಗೆ ಇಲ್ಲ. ತಾಲ್ಲೂಕು level ನಲ್ಲಿ, very clearly, ನೀವು ಬೇಕಾದರೆ ನೋಡಿ. ಯಾವುದೇ ತಾಲ್ಲೂಕು headquarters ಅಂಗಡಿಗೆ ಹೋಗಿ ತಾವೇ ಪರಿಶೀಲನೆ ಮಾಡಿ, ಅಲ್ಲಿ ಯಾವ VAT ಅನ್ನು ನಾವು ನೋಡುವುದೇ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ನಿಮಗೆ ಇಷ್ಟು ಭರವಸೆಯನ್ನು ಕೊಡುತ್ತೇನೆ. ಈ I.T. Industry ಬಗ್ಗೆ ಈ service tax ಅನ್ನು Government of India ಕೊಡುತ್ತಿದೆ. ಎರಡನೆಯದು, ಈ service apartments ಏನಿದೆ ಮತ್ತು catering services ಏನಿದೆ, ಇದನ್ನು ಈಗಾಗಲೇ ನಾವು VAT ನ ಅಡಿಯಲ್ಲಿ ತಂದು ತೆರಿಗೆ ಸಂಗ್ರಹ ಮಾಡುತ್ತಿದ್ದೇವೆ. ಬಿಗಿ ಕ್ರಮ ತೆಗೆದುಕೊಂಡಿದ್ದೇವೆ, ಕಳೆದ ಮೂರು ತಿಂಗಳಲ್ಲಿ ಯಾವುದೇ loss ಆಗಿಲ್ಲ, ನಮ್ಮ ನಿರೀಕ್ಷೆಯಷ್ಟು ತೆರಿಗೆ ಸಂಗ್ರಹವಾಗಿದೆ. ತಾವೇನು ಸಲಹೆಗಳನ್ನು ಕೊಟ್ಟಿದ್ದೀರಿ, ಅದೆಲ್ಲಾ ಕಡೆ ನಿಗಾ ಇಡುತ್ತೇವೆ. ಗಮನ ಕೊಡುತ್ತೇವೆ. ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ತೆರಿಗೆ ಸಂಗ್ರಹ ಮಾಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ. ಏಕೆಂದರೆ ಕೇವಲ ಕಳೆದ ವರ್ಷದಿಂದ ಈ ಯೋಜನೆ ಪ್ರಾರಂಭವಾಗಿರುವುದರಿಂದ ಈ ಒಂದು VAT ಪದ್ಧತಿ ಸ್ವಲ್ಪ ಸರಳವಾಗಿ ಅವರಿಗೆ ಹೆಚ್ಚು ಭಾರವಾಗದ ರೀತಿಯಲ್ಲಿ ವಿಶ್ವಾಸ ತೆಗೆದುಕೊಂಡು ಮಾಡಬೇಕೆನ್ನುವ ದೃಷ್ಟಿಯಿಂದ ಸ್ವಲ್ಪ ಹೋಗುತ್ತಿದೆ. ನೀವು ಹೇಳಿದೆಲ್ಲವನ್ನೂ cover ಮಾಡುತ್ತಿದ್ದೇವೆ. ಬಹುಶಃ ಇನ್ನು 2–3 ತಿಂಗಳಲ್ಲಿ ಆ ಒಂದು ಪ್ರಗತಿಯನ್ನು ತಾವು ನೋಡಬಹುದು.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅರ್ಥ ಸಚಿವರು ಉತ್ತರದಲ್ಲಿ ಹೇಳಿದ್ದಾರೆ. VAT ಕಾಯ್ದೆಯಡಿ ಈಗಾಗಲೇ 1,65,679 ವರ್ತಕರನ್ನು ನೋಂದಣಿಯನ್ನು ಮಾಡಿಕೊಂಡು

ಅದನ್ನು ಜಾರಿಗೊಳಿಸಿದ್ದೇವೆ, ಇನ್ನೂ ನಮ್ಮ ರಾಜ್ಯದಲ್ಲಿ 58,202 ವರ್ತಕರು VAT ಕಾಯಿದೆಯಡಿ ನೋಂದಣಿ ಮಾಡಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ಮೌಲ್ಯವರ್ಧಿತ ತೆರಿಗೆ ಯೋಜನೆಯನ್ನು ಜಾರಿಗೆ ತಂದು ಈಗಾಗಲೇ ಒಂದೂವರೆ ವರ್ಷವಾಯಿತು. ಒಂದೂವರೆ ವರ್ಷಗಳಾದ ಮೇಲೂ ಕೂಡ ಇನ್ನು ಸುಮಾರು 58 ಸಾವಿರ ವರ್ತಕರನ್ನು ಈ ಕಾಯಿದೆ ಅಡಿಯಲ್ಲಿ ನೋಂದಣಿ ಮಾಡದೆ ಇರತಕ್ಕಂಥದ್ದನ್ನು ನೋಡಿದರೆ ಬಹಳಷ್ಟು ಬಿಗಿ ಕ್ರಮಗಳನ್ನು ಸರ್ಕಾರ ತೆಗೆದುಕೊಂಡಿಲ್ಲ. ಇದರ ಬಗ್ಗೆ ತೀವ್ರವಾದಂಥ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳಬೇಕು. ಏಕೆಂದರೆ 58 ಸಾವಿರ ವರ್ತಕರು ಇನ್ನು ನೋಂದಾಯಿಣಿ ಮಾಡಿಸಿಲ್ಲದೆ ಇರತಕ್ಕಂಥದ್ದು ಕಡಿಮೆ ಸಂಖ್ಯೆ ಏನಲ್ಲ. ಒಂದೂವರೆ ವರ್ಷವಾದರೂ ಕೂಡ ಅವರೇಕೆ ಇನ್ನೂ ನೋಂದಣಿ ಮಾಡಿಕೊಂಡಲ್ಲ? ನೋಂದಣಿ ಮಾಡಿಕೊಳ್ಳದೆ ಇರತಕ್ಕಂತ ವರ್ತಕರ ಮೇಲೆ ಒಂದು ಟೈಂ ಬಾಂಡ್ ಮಾಡಿ ಅಂದರೆ, ಇಷ್ಟು ದಿನದೊಳಗೆ ಮಾಡಿಕೊಳ್ಳಲೇ ಬೇಕೆಂದು ನಿಗಧಿಪಡಿಸಬೇಕಾಗುತ್ತದೆ. ಈ ಅವಧಿಯಲ್ಲಿ ಮಾಡಿಕೊಳ್ಳದಿದ್ದರೆ ಅವರ ಲೈಸನ್ಸ್‌ನ್ನು ಕ್ಯಾನ್ಸಲ್ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಅಂಥವರ ಮೇಲೆ ದಂಡವನ್ನು ಹಾಕುತ್ತೀರಾ ಎನ್ನತಕ್ಕಂಥದ್ದನ್ನು ಮಾನ್ಯ ಆರ್ಥಿಕ ಸಚಿವರು ತಿಳಿಸಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲಿ ಒಂದು ವಿಷಯವನ್ನು ತಾವು ಗಮನಿಸಬೇಕು. 1,65,879 ಮಳಿಗೆಗಳಿಗೆ ಭೇಟಿ ನೀಡಿ ಅವರು ವ್ಯಾಟ್ ಚೌಕಟ್ಟಿನೊಳಗೆ ಬಂದಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲನೆ ಮಾಡಿದಾಗ ಇದರಲ್ಲಿ 58,202 ವ್ಯಾಪಾರಸ್ಥರು ವ್ಯಾಟ್‌ಗೆ ರಿಜಿಸ್ಟರ್ ಮಾಡಿಸಿರಲಿಲ್ಲ. ಈಗ ಅವರನ್ನೂ ಕೂಡ ರಿಜಿಸ್ಟರ್ ಮಾಡಿಸಿದ್ದೇವೆ.

ಶ್ರೀ ಎಂ. ಮಹದೇವ : 58,202 ವ್ಯಾಪಾರ ಮಳಿಗೆಗಳು ವ್ಯಾಟ್‌ಗೆ ರಿಜಿಸ್ಟರ್ ಮಾಡಿಸಿರಲಿಲ್ಲವೆಂದು ತಾವು ಹೇಳಿದ್ದೀರಿ. ಆದ್ದರಿಂದ ನಾನು ಕೇಳುವುದೇನೆಂದರೆ, ಇದು ಬೆಂಗಳೂರು ಮತ್ತು ಮೈಸೂರು ಹಾಗೂ ಇತರೇ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲಿ ಎಷ್ಟು ಎನ್ನತಕ್ಕಂಥದ್ದರ break-up ಮಾಹಿತಿ ಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : 58,202 ವ್ಯಾಪಾರಸ್ಥರನ್ನು ವ್ಯಾಟ್ ಕಾಯಿದೆ ಅಡಿಯಲ್ಲಿ ಈಗಾಗಲೇ ರಿಜಿಸ್ಟರ್ ಮಾಡಿಸಿದ್ದೇವೆ. ಹಾಗೆಯೇ ಆ ಟ್ಯಾಕ್ಸ್ ಡೇಟ್‌ನ್ನೂ ಕೂಡ ವಿಸ್ತರಣೆ ಮಾಡಿದ್ದೇವೆ. ಮತ್ತೆ ಇನ್ನು ತೀವ್ರವಾದಂಥ ಧಾಳಿ ಮಾಡುತ್ತಿದ್ದೇವೆ. ಈ ಒಂದು ಕಾರ್ಯಮಾಡಿದ ನಂತರ ಆದಂಥ ಎರಡು–ಮೂರು ತಿಂಗಳ ಪ್ರಗತಿಯನ್ನು ಮಾತ್ರ ತಮಗೆ ಹೇಳಿದ್ದೇನೆ. ಮತ್ತೆ ಇನ್ನೊಂದು ಅಂಶವನ್ನು ನಾನು ತಮಗೆ ಹೇಳಿದ್ದೇನೆ. ಅದೇನೆಂದರೆ, ಈ ವರ್ಷ 2050 ಕೋಟಿ ರೂಪಾಯಿ ಲಾಸ್ ಆಗುತ್ತದೆಂದು ನಾವು ತಿಳಿದುಕೊಂಡಿದ್ದೆವು. ಮತ್ತೆ ಹೋದ ವರ್ಷ ಕೂಡ ಲಾಸ್ ಆಗಿದ್ದಂಥ 1272.20 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರ ನಮಗೆ ತುಂಬಿಕೊಟ್ಟಿತ್ತು. ಈ ವರ್ಷದಲ್ಲಿ ಅಂದರೆ ಕಳೆದ ಮುರು ತಿಂಗಳಿಂದ ನಮಗೇನೂ ಲಾಸ್ ಆಗಿಲ್ಲ. ನಾವು ಎಷ್ಟು ನಿರೀಕ್ಷೆ ಮಾಡಿ ಸಂಗ್ರಹಣ ಮಾಡಬೇಕಾಗಿತ್ತೋ, ಅಷ್ಟನ್ನು ನಾವು ಮಾಡಿದ್ದೇವೆ. ಮುಂದೆ ಏನಾಗುತ್ತದೆಯೋ ನೋಡೋಣ. ಆದರೆ ಬಿಗಿ ಕ್ರಮವನ್ನು ಖಂಡಿತ ತೆಗೆದುಕೊಳ್ಳುತ್ತಿದ್ದೇವೆ. ಇನ್ನು ಎರಡು–ಮೂರು ಪ್ರತಿ ತಿಂಗಳು

ಏನು ಪ್ರಗತಿ ಆಗುತ್ತದೆ ಎನ್ನತಕ್ಕಂಥ ಪರಾಹಿತಿಗಳನ್ನು ನಾನು ನಿಮಗೆ ಕೊಡುತ್ತೇನೆ. ಮತ್ತೆ ಯಾವ್ಯಾವ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಆಗಿದೆ ಎನ್ನತಕ್ಕಂಥ ವಿವರಣೆ ಕೇಳಿದ್ದೀರಿ, ಈ ವಿವರಗಳನ್ನು ನಾನು ನಮಗೆ ಕಳುಹಿಸಿಕೊಡುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ : 1,65,679 ವ್ಯಾಪಾರ ಮಳಿಗೆಗಳಿಗೆ ಭೇಟಿ ನೀಡಲಾಗಿದ್ದು, ಇದರಲ್ಲಿ 58,202 ಮಳಿಗೆಗಳು ರಿಜಿಸ್ಟರ್ ಮಾಡಿಕೊಂಡಿಲ್ಲವೆಂದು ತಾವೇ ಉತ್ತರದಲ್ಲಿ ಹೇಳಿದ್ದೀರಿ. ಅಂದರೆ ಇನ್ನೂ 50 ಪರ್ಸೆಂಟ್‌ನಷ್ಟು ಮಳಿಗೆಗಳು ವ್ಯಾಟ್‌ಗೆ ರಿಜಿಸ್ಟರ್ ಮಾಡಿಕೊಂಡಲ್ಲ. ಕೇವಲ 50 ಪರ್ಸೆಂಟ್‌ನಷ್ಟು ಟ್ರೇಡರ್ಸ್ ಮಾತ್ರ ರಿಜಿಸ್ಟರ್ ಮಾಡಿಕೊಂಡಿದ್ದಾರೆ. ನೀವು ನೀಡಿರತಕ್ಕಂಥ ಉತ್ತರದಲ್ಲಿಯೇ ಈ ಮಾಹಿತಿ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಇಲ್ಲವೆಂದು ಹೇಳುತ್ತಿಲ್ಲ. ನಾನು ಸತ್ಯವನ್ನೇ ಹೇಳಬೇಕಾಗಿದೆ. ನಾನು ಏನನ್ನೂ ಮುಚ್ಚಿಡುವುದಕ್ಕೆ ಆಗುವುದಿಲ್ಲ. ನಾನು ಬಹಳ ಪ್ರಾಮಾಣಿಕವಾಗಿ ಈ ವಿಷಯವನ್ನು ತಮ್ಮ ಮುಂದೆ ಒಪ್ಪಿಕೊಂಡಿದ್ದೇನೆ.

ಶ್ರೀ ಬಸವರಾಜ ರಾಯರೆಡ್ಡಿ : ಪ್ರಾಮಾಣಿಕತನದ ಪ್ರಶ್ನೆ ಇಲ್ಲಿ ಬರುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ನಿಮಿಷ. ನಾವೇನು ಮಾಡಿದ್ದೇವೆ ಎಂಬುದನ್ನು ಹೇಳುತ್ತಿದ್ದೇನೆ. ನಾವು 1 ಲಕ್ಷ 65 ಸಾವಿರ ಮಳಿಗೆಗಳಿಗೆ ಭೇಟಿ ನೀಡಿ ಇದರಲ್ಲಿ ತೆರಿಗೆ ವ್ಯಾಪ್ತಿಗೆ ಬರದೆ ಇರತಕ್ಕಂಥ 58,202 ವ್ಯಾಪಾರಸ್ಥರನ್ನು ಈ ತೆರಿಗೆ ವ್ಯಾಪ್ತಿಯ ಅಡಿಯಲ್ಲಿ ತಂದಿದ್ದೇವೆ. ಈಗಾಗಲೇ 3 ಲಕ್ಷ 45 ಸಾವಿರ ಡೀಲರ್‌ಗಳು ರಿಜಿಸ್ಟರ್ ಮಾಡಿಕೊಂಡಿದ್ದಾರೆ. ಮತ್ತೆ ಈಗ 58,200 ಟ್ರೇಡರ್ಸ್ ರವರನ್ನು ಈ ತೆರಿಗೆ ವ್ಯಾಪ್ತಿಗೆ ತಂದಿದ್ದೇವೆ. ಈ ಕೆಲಸ ಪ್ರಗತಿ ಕಡೆ ಇದೆ. ಇನ್ನು ಎರಡು-ಮೂರು ತಿಂಗಳಲ್ಲಿ ವ್ಯಾಟ್‌ನಿಂದ ತಪ್ಪಿಸಿಕೊಂಡಂಥವರನ್ನು ಪರಿಶೀಲನೆ ಮಾಡಿ ಬಿಗಿ ಕ್ರಮ ತೆಗೆದುಕೊಳ್ಳತಕ್ಕಂಥದ್ದರ ಬಗ್ಗೆ ಪ್ರಾಮಾಣಿಕ ಪ್ರಯತ್ನವನ್ನು ನಮ್ಮ ಶಕ್ತಿ ಮೀರಿ ಮಾಡುತ್ತೇವೆ. ನಾವು ತೆಗೆದುಕೊಂಡಿರತಕ್ಕಂಥ ಈಗಿನ ಕ್ರಮದ ಪರಿಣಾಮವಾಗಿ ಈ ಮೂರು ತಿಂಗಳು ನಮಗೆ ಏನೂ ಲಾಸ್ ಆಗಿಲ್ಲ ಎನ್ನತಕ್ಕಂಥ ಅಂಕಿ-ಅಂಶಗಳನ್ನು ತಮಗೆ ಹೇಳಿದ್ದೇನೆ. ಆದ್ದರಿಂದ ತಾವು ನಮಗೆ ಅಪ್ರೀಷಿಯೇಟ್ ಮಾಡಬೇಕು. ನಾವೇ ವ್ಯಾಟ್ ಅಡಿಯಲ್ಲಿ ತೆರಿಗೆ ಸಂಗ್ರಹ ಮಾಡುವ ಕಡೆ ವಿಶೇಷ ಗಮನ ಕೊಡುವುದರ ಜೊತೆಗೆ ಹೆಚ್ಚು ಒತ್ತು ಕೊಟ್ಟು ಬಿಗಿ ಕೂಡ ಮಾಡುತ್ತೇವೆ.

ಅಧ್ಯಕ್ಷರು : ಮುಂದಿನ ಪ್ರಶ್ನೆ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪನವರದು. ಅವರು ಬಂದಿಲ್ಲವೆಂದು ಕಾಣುತ್ತದೆ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ನನ್ನದೊಂದು ಪ್ರಶ್ನೆ ಇದೆ.

ಅಧ್ಯಕ್ಷರು : ನಿಮ್ಮ ಪ್ರಶ್ನೆ ಇದೆ. ಆದರೆ, ನೀವು ಯಾವಾಗಲಾದರೂ ಬಂದರೆ ನಿಮ್ಮ ಪ್ರಶ್ನೆ ಅಲ್ಲಿಯೇ ಉಳಿದುಕೊಳ್ಳುತ್ತದೆಯೇ?

ಶ್ರೀ ಸಿ.ಟಿ. ರವಿ : ನಾನು ಒಳಗೆ ಬರುತ್ತಿರುವ ಸಂದರ್ಭದಲ್ಲಿ ತಾವು ಕೂಗಿದಿರಿ.

ಅಧ್ಯಕ್ಷರು : ಪ್ರಶ್ನೆ ಕೇಳಿದ ಮೇಲೆ ತಾವು ಸಮಯಕ್ಕೆ ಸರಿಯಾಗಿ ಬರಬೇಕು. ಈಗ ತಮ್ಮ ಪ್ರಶ್ನೆಯನ್ನು ಕೇಳಿ.